## ಎರಡನೇ ಸೆಮಿಸ್ಟರ್ ಬಿ.ಕಾಂ

# ಕನ್ನಡ ಶೋಕಚಕ್ರ ನಾಟಕ

**ನಾಟಕಕಾರ ಪರಿಚಯ**: ಶ್ರೀರಂಗ (೧೯೦೪-೧೯೮೪) ಇವರು ವಿಜಾಪುರ ಜಿಲ್ಲೆಯ ಅಗರಖೇಡದಲ್ಲಿ ಜನಿಸಿದರು. ಇವರ ಹೆಸರು ಆದ್ಯ ರಂಗಾಚಾರ್ಯ. 'ಶ್ರೀರಂಗ' ಇವರ ಕಾವ್ಯನಾಮ. ಸಂಸ್ಕೃತದಲ್ಲಿ ಪಂಡಿತರಾಗಿದ್ದ ಇವರು ಸಂಸ್ಕೃತ ಅಧ್ಯಾಪಕರಾಗಿದ್ದರು. ಇವರು ನಾಟಕಕಾರ, ಕವಿ ಮತ್ತು ವಿಮರ್ಶಕರಾಗಿ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ನಾಟಕಗಳು: ಹರಿಜನದ್ವಾರ, ಕತ್ತಲೆಬೆಳಕು, ಸಂಧ್ಯಾಕಾಲ, ಅಗ್ನಿಸಾಕ್ಷಿ, ಸ್ವರ್ಗಕ್ಕೆ ಮೂರೇ ಬಾಗಿಲು ಮುಂತಾದವು. ಕಾವ್ಯ: ಆಹ್ವಾನ, ಕಾದಂಬರಿ, ಪುರುಷಾರ್ಥ, ಪ್ರಕೃತಿ, ಉತ್ತರವಿಲ್ಲದ ಪ್ರಶ್ನೆ, ಶಾಮರಾಯನ ಸತ್ಯ ಇತ್ಯಾದಿ. ಇವರಿಗೆ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಬಂದಿದೆ.

ಭಾರತದ ಸ್ವಾತಂತ್ರ್ಯ ನಂತರದ ರಾಜಕೀಯ ಪರಿಸ್ಥಿತಿಗೆ ಕನ್ನಡಿ ಹಿಡಿದಂತೆ ಶೋಕಚಕ್ರ ನಾಟಕ ಇದೆ. ಗಾಂಧಿವಾದಿಯಾದ ಜಯರಾಯರಂತಹ ರಾಜಕಾರಣಿಗಳಿಗೆ ಸಮಯಸಾಧಕ, ಪುಡಾರಿ ಹನುಮಂತಪ್ಪನಂತಹವರಿಂದ ಸೋಲಾಗುತ್ತದೆ. ಗಾಂಧಿತತ್ವ, ಮೌಲ್ಯಗಳ ಪ್ರತಿನಿಧಿಯಾಗಿ ಜಯರಾಯ ಕಂಡುಬಂದರೆ ಮೌಲ್ಯಗಳು ಇಲ್ಲದ ಇಂದಿನ ಅಧಿಕಾರದಾಹದ ರಾಜಕಾರಣಿಯ ಪ್ರತಿನಿಧಿಯಂತೆ ಹನುಮಂತಪ್ಪ ಕಂಡುಬರುತ್ತಾನೆ. ಮೌಲ್ಯ, ಅಪಮೌಲ್ಯಗಳ ವಿರುದ್ಧ ಹಾಗೂ ಗಾಂಧಿತತ್ವದ ವಿರುದ್ಧ ಸಮಯಸಾಧಕತನ, ಪ್ರಚಾರ, ಅಧಿಕಾರದಾಹದ ಸಂಘರ್ಷವೆ ನಾಟಕದ ಕೇಂದ್ರವಸ್ತು. ಸಮಾಜದಲ್ಲಿ ಗಾಂಧಿತತ್ವ ಪ್ರತಿಪಾದಿಸುವ ಮೂಲಕ ವಿವೇಕ, ಜಾಗೃತಿಗಳನ್ನು ಉಂಟುಮಾಡುವುದು ಶೋಕಚಕ್ರ ನಾಟಕದ ಆಶಯ.

ಪಾತ್ರಗಳ ಪರಿಚಯ: ಸ್ವಾತಂತ್ರ್ಯ ಹೋರಾಟಗಾರ ಗಾಂಧಿತತ್ವಗಳನ್ನು ಅನುಸರಿಸುವ ನಾಟಕದ ನಾಯಕಪಾತ್ರ ಜಯರಾಯ, ಜಯರಾಯನ ಹೆಂಡತಿ ರಂಗಮ್ಮ. ಜಯರಾಯನ ಮಗ ಶಾಮರಾಯ, ಜಯರಾಯನ ಹಿಂಬಾಲಕ ಗೋವಿಂದಪ್ಪ. ಹನುಮಂತಪ್ಪ ಕುಟಿಲ, ಸ್ವಾರ್ಥ ರಾಜಕಾರಣಿ ನಾಟಕದ ಖಳನಾಯಕ. ರಾಮಣ್ಣ, ಶೀನಪ್ಪ, ಸೆಕ್ರಟರಿ ಮತ್ತು ಭೀಮಣ್ಣ ಹನುಮಂತಪ್ಪನ ಸಂಗಡಿಗರು. ವೆಂಕಣ್ಣ ಪತ್ರಿಕಾಪ್ರತಿನಿಧಿ.

ಮೂರು ಅಂಕಗಳ ನಾಟಕ. ಮೊದಲ ಅಂಕದಲ್ಲಿ ಜಯರಾಯನ ಮನೆಯಲ್ಲಿ ನಡೆಯುವ ಘಟನೆಗಳು ಜಯರಾಯನ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತವೆ. ಸ್ವಾತಂತ್ರ್ಯ ದಿನಾಚರಣೆಗೆ ಜಯರಾಯನನ್ನು ಕರೆದುಕೊಂಡು ಹೋಗಲು ಬರುವ ಹನುಮಂತಪ್ಪ ತನ್ನ ಸ್ವಾರ್ಥಕ್ಕೆ ಜಯರಾಯನನ್ನು ಬಳಸಿಕೊಳ್ಳುವ ಲೆಕ್ಕಾಚಾರ ಹಾಕುತ್ತಾನೆ. ಇದು ಅಮಾಯಕ ಜಯರಾಯ, ರಂಗಮ್ಮ, ಗೋವಿಂದಪ್ಪ ಇವರಿಗೆ ತಿಳಿಯುವುದಿಲ್ಲ. ಆದರೆ ಶಾಮನಿಗೆ ಹನುಮಂತಪ್ಪನ ದುಷ್ಟತನ, ಮುಂದಾಲೋಚನೆಗಳ ಸುಳಿವು ತಿಳಿದಿರುತ್ತದೆ. ಗೋವಿಂದಪ್ಪನ ಮೂಲಕ ಜಯರಾಯನ ಹಿಂದಿನ ಬದುಕು ವಿವರಗಳು ತಿಳಿಯುತ್ತವೆ. ಪ್ರಸಿದ್ಧ ವಕೀಲನಾದ ಜಯರಾಯ ಸ್ವಾತಂತ್ರ್ಯದ ಹೋರಾಟ ಮತ್ತು ಗಾಂಧಿ ಭಾಷಣಗಳು ಸ್ವತಾಂತ್ರ್ಯದ ಹೋರಾಟಕ್ಕೆ ಹೋಗಲು ಮುಖ್ಯ ಕಾರಣವೆನ್ನುವುದನ್ನು ಹೇಳುತ್ತಾನೆ. ಇದೆ ಸಮಯದಲ್ಲಿ ಜಯರಾಯನ ಜೊತೆಗೆ ಹೆಂಡತಿ ರಂಗಮ್ಮ ಜೈಲುವಾಸ ಅನುಭವಿಸಿದ್ದನ್ನು ನೆನೆಪಿಸಿಕೊಳ್ಳುತ್ತಾಳೆ. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಸಂದರ್ಶನ ಮಾಡಲು ಬಂದ ರಣಹಲಗೆ ಪತ್ರಿಕಾ ವರದಿಗಾರ ವೆಂಕಣ್ಣನಿಗೆ ನೀಡುವ ವಿವರಗಳು ಸ್ವಾತಂತ್ರ್ಯ ಹೋರಾಟವನ್ನು ಕುರಿತು ನೆನಪು ಮಾಡುವಂತೆ ನಿರೂಪಿತವಾಗಿದೆ. 'ಸ್ವಾತಂತ್ರ್ಯ ಸಿಕ್ಕದ್ದಲ್ಲ, ಗಳಿಸಿದ್ದು. ಮಾತಿನಲ್ಲಿ ಗಂಡಸುತನವಿರಲಿ. ಸುಖ ಸುಮ್ಮನೆ ರಸ್ತೆಯಲ್ಲಿ ಸಿಕ್ಕಿಲ್ಲ ಹೋರಾಟದ ಫಲ ಸ್ವಾತಂತ್ರ್ಯ' ಎಂದು ಜಯರಾಯ ಹೇಳುತ್ತಾನೆ. ಗಾಂಧೀಜಿಯವರು ಸ್ವಾತಂತ್ರ್ಯ ನಂತರ ಸ್ವರಾಜ್ಯ ಬರುತ್ತದೆಂದು ದೇಶ ಉದ್ಧಾರ ಆಗುತ್ತದೆಂದು ಕನಸು ಕಂಡಿದ್ದರು. ಸ್ವಾತಂತ್ರ್ಯ ದಿನವನ್ನು ಜನ ಆಚರಿಸುವುದು ನೋಡಿ 'ಮನೆಯಲ್ಲಿನ ಹೆಗ್ಗಣ ಹೊರಗೆ ಹೋದರೆ, ಅಂಗಳದಲ್ಲಿ ಬಂದು ಕುಣಿದಾಡಬೇಕೊ ಅಥವಾ ಬಿಲ ಮುಚ್ಚಬೇಕೊ' ಎಂದು ಹೇಳುತ್ತಾರೆ. ಈ ಮೂಲಕ ನವ ವಸಾಹತುಶಾಹಿಯ ಮೂಲಕ ವಿದೇಶಿ ಬಂಡವಾಳಶಾಹಿಗಳು, ಬಹುರಾಷ್ಟ್ರೀಯ ಕಂಪನಿಗಳು ಮತ್ತೆ ಬಂದು ಇಲ್ಲಿ ವ್ಯಾಪಾರ ಮಾಡಿ ನಮ್ಮನ್ನು ಅತಂತ್ರರನ್ನಾಗಿ ಮಾಡುವ ಹುನ್ನಾರಗಳ ಸುಳಿವು ನೀಡುತ್ತಾರೆ. ಆದುದರಿಂದಲೇ ನಾಟಕ ಇಂದು ಅತ್ಯಂತ ಪ್ರಸ್ತುತವಾಗಿದೆ. ತಮ್ಮ ಸ್ವಾರ್ಥಕ್ಕಿಂತ ಊರು, ದೇಶದ ಏಳಿಗೆಯೇ ಜಯರಾಯರಿಗೆ

ಮುಖ್ಯವಾಗಿರುತ್ತದೆ. ಊರಿನ ರಸ್ತೆಗಳು ದೊಡ್ಡಾಗಿರಬೇಕು, ಕೆರೆ, ಕಾಲುವೆ ನಾವೇ ಮಾಡಬೇಕು. ಸ್ವಚ್ಛವಾಗಿರಬೇಕು, ಜನ ಆರೋಗ್ಯವಾಗಿರಬೇಕು ನಮ್ಮ ಊರನ್ನು ನಾವೇ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂಬ ಕಳಕಳಿ ಜಯರಾಯನದು.

ಹನುಮಂತಪ್ಪ ತಾನು ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಮಾಡಬೇಕು ಎಂದಿರುವಾಗ ಕೆಲವರು ಇದನ್ನು ವಿರೋಧಿಸುತ್ತಾರೆ. ಇದನ್ನು ತಿಳಿದು ಹನುಮಂತಪ್ಪ ಜಯರಾಯನ ಮೂಲಕ ಧ್ವಜಾರೋಹಣ ಮಾಡಿಸಿ ತಾನು ಜನಬೆಂಬಲ ಪಡೆಯಬೇಕು ಎಂಬ ಹುನ್ನಾರ ಮಾಡುತ್ತಾನೆ.

ಎರಡನೆ ಅಂಕದ ಮೊದಲ ದೃಶ್ಯ ಪಾರ್ಟಿ ಆಫೀಸಿನಲ್ಲಿ ನಡೆಯುವ ವಿವರಗಳೊಂದಿಗೆ ಪ್ರಾರಂಭವಾಗುತ್ತದೆ. ಆಫೀಸಿನಲ್ಲಿ ಹನುಮಂತಪ್ಪ, ರಾಮಣ್ಣ, ಶೀನಪ್ಪ, ಸೆಕ್ರಟರಿ ಮತ್ತು ಭೀಮಣ್ಣ ಇರುತ್ತಾರೆ. ಇವರೆಲ್ಲ ಮುನಿಸಿಪಾಲಿಟಿ ಎಲೆಕ್ಷನ್ ಮತ್ತು ಛೇರಮನ್ ಸಾಧ್ಯತೆ ಬಗ್ಗೆ ಚರ್ಚಿಸುತ್ತಾರೆ. ಪ್ರತಿಯೊಬ್ಬರಲ್ಲೂ ತಾವೇ ಛೇರ್ಮನ್ ಆಗಬೇಕೆಂಬ ಆಸೆಯಿರುವುದು ಅವರ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಹಾಗೂ ಅವರಲ್ಲಿಯೇ ಚರ್ಚೆಗಳಾಗಿ ಸ್ಥಾನಗಳ ಅರಿವು, ಅರ್ಹತೆ ಇಲ್ಲದಿದ್ದರೂ ಹಂಚಿಕೊಳ್ಳುತ್ತಾರೆ. ಇವರೆಲ್ಲರ ಸ್ಥಾನಗಳ ಪಡೆಯುವಿಕೆಗೆ ಜಯರಾಯ ತೊಡಕಾಗಿರುವುದು ಗಮನಕ್ಕೆ ಬರುತ್ತದೆ. ಜಯರಾಯನನ್ನು ಹೆಸರಿಗೆ ಪ್ರೆಸಿಡೆಂಟ್ ಮಾಡಿ, ಹನುಮಂತಪ್ಪ ಛೇರ್ಮನ್ ಆಗುವುದರಿಂದ ಎಲ್ಲವನ್ನು ನಿಬಾಯಿಸಬಹುದೆಂದು ಅದಕ್ಕಾಗಿ ಆಹ್ವಾನಿಸಲು ಹೋಗುತ್ತಾನೆ. ಅಲ್ಲದೇ ಜಯರಾಯ ಚುನಾವಣೆಗೆ ಸ್ಪರ್ಧಿಸಿ ಸೋತರೆ ಅವಮಾನವಾಗುತ್ತದೆ ಎಂಬ ಸುಳ್ಳನ್ನು ಹೇಳಿ ಜಯರಾಯನನ್ನು ಹೆದರಿಸುವುದಾಗಿ ಹೇಳುತ್ತಾನೆ. ಆಗ ಸೆಕ್ರೆಟರಿ ಹೆದರದೆ ಚುನಾವಣೆಗೆ ನಿಂತರೆ ಏನು ಮಾಡುವುದು ಎಂದು ಅನುಮಾನ ವ್ಯಕ್ತಪಡಿಸಿದಾಗ ನಾನೇ ಎದುರು ಓಟು ಹಾಕುತ್ತೇನೆ ಎಂದು ಹನುಮಂತಪ್ಪ ಹೇಳುತ್ತಾನೆ. ಅಷ್ಟೇ ಅಲ್ಲದೇ ಮುನಿಸಿಪಾಲಿಟಿಯನ್ನು ರದ್ದು ಪಡಿಸುತ್ತೇನೆ, ಚುನಾವಣೆಯನ್ನೇ ರದ್ದು ಪಡಿಸುವುದಾಗಿ ಹೇಳುವ ಮೂಲಕ ಜಯರಾಯನ ಬಗೆಗಿನ ಅಸಮಧಾನವನ್ನು ಹೊರಹಾಕುತ್ತಾನೆ. ಹನುಮಂತಪ್ಪ ಮುನಿಸಿಪಾಲಿಟಿ ಕಚೇರಿ, ಹಾಲ್ ಕಟ್ಟೋಣ ನಾವೆಲ್ಲ ಕುಳಿತು ಕೊಳ್ಳಲು ಎಂದು ಹೇಳಿದರೆ, ಜಯರಾಯ ಶಾಲಾ ಕಟ್ಟಡ ಕಟ್ಟುವ, ಊರಿನ ರಸ್ತೆ, ಚರಂಡಿಗಳನ್ನು ಸ್ವಚ್ಛಮಾಡೋಣ ಎಂದು ಹೇಳುತ್ತಾನೆ. ಮುನಿಸಿಪಾಲಿಟಿಯ ಸ್ಥಾನಗಳನ್ನು ತಮ್ಮಲ್ಲಿ ಹಂಚಿಕೊಳ್ಳುವ ಸಂದರ್ಭದಲ್ಲಿ ಎಲ್ಲರ ಮಾತುಗಳನ್ನು ಕೇಳಿದ ಹನುಮಂತಪ್ಪ ಕೊನೆಗೆ ಎಲ್ಲರನ್ನು ಹೊರಗೆ ಕಳುಹಿಸಿ ತನ್ನ ಹಿಂಬಾಲಕ ಸೀನಪ್ಪನಿಗೆ ಅಧ್ಯಕ್ಷನನ್ನಾಗಿ ಮಾಡುವುದಾಗಿ ಹೇಳುತ್ತಾನೆ. ಹೀಗೆ ಹನುಮಂತಪ್ಪ ಒಬ್ಬೊರೊಂದಿಗೆ ಒಂದೊಂದು ರೀತಿ ಒಂದೊಂದು ಸಮಯಕ್ಕೆ ಹೇಳಿ ತನ್ನ ಬೇಳೆ ಬೇಯಿಸಿಕೊಳ್ಳುವ ಕುತಂತ್ರಿ ರಾಜಕಾರಣಿಯಾಗಿ ಕಂಡುಬರುತ್ತಾನೆ.

ಎರಡನೆ ಅಂಕದ ಎರಡನೆ ದೃಶ್ಯದಲ್ಲಿ ಮಹಾತ್ಮ ಗಾಂಧೀಜಿಯವರ ಸಭೆಯಲ್ಲಿ ಬಾಂಬ್ ಇಟ್ಟ ಸುದ್ದಿ ರೇಡಿಯೋದ ಮೂಲಕ ಪ್ರಸಾರವಾಗುತ್ತದೆ. ಈ ಸುದ್ದಿ ಕೇಳಿದ ಗಾಂಧಿವಾದಿಗಳಾದ ಶಾಮ, ರಂಗಮ್ಮ, ಗೋವಿಂದಪ್ಪ ದಿಗ್ಭ್ರಮರಾಗಿದ್ದಾರೆ. ಮುನಿಸಿಪಾಲಿಟಿಯ ಪ್ರೆಸಿಡೆಂಟ್‌ರಾದ ಜಯರಾಯರು ಊರಿನ ಉದ್ಧಾರ ಮಾಡುವ ಮೊದಲ ಪ್ರಯತ್ನವಾಗಿ ಮಾರುಕಟ್ಟೆಯ ನವೀಕರಣ ಮಾಡಲು ನಿರ್ಧಾರಿಸುತ್ತಾರೆ. ಮಾರುಕಟ್ಟೆಯ ನವೀಕರಣದ ಸಲುವಾಗಿ ಮುನಿಸಿಪಾಲಿಟಿಯ ಕಚೇರಿಯಲ್ಲಿ ಸಭೆ ನಡೆಯುತ್ತಿರುತ್ತದೆ. ಮಧ್ಯೆ ರಾತ್ರಿಯಾದರೂ ಜಯರಾಯರು ಮನೆಗೆ ಬರದಿದ್ದಾಗ ಮನೆಯವರಿಗೆಲ್ಲ ಗಾಬರಿಯಾಗುತ್ತದೆ.

ಮೂರನೇ ದೃಶ್ಯದಲ್ಲಿ ಜಯರಾಯರು ಪ್ರೆಸಿಡೆಂಟ್ ಆಗಿದ್ದು ಕೆಲವರಿಗೆ ಇಷ್ಟವಿಲ್ಲ ಇದರಿಂದ ಸೀನಪ್ಪನಿಗೆ ಮತ್ತು ಹನುಮಂತಪ್ಪನಿಗೆ ಕೋಪಬಂದಿದೆ ಎಂದು ರಂಗಮ್ಮ ಹೇಳುತ್ತಾಳೆ. ಆಗ ಅಲ್ಲಿಗೆ ಬಂದ ರಣಹಲಗೆ ಪತ್ರಿಕೆಯ ವೆಂಕಣ್ಣ ಹೇಳಿದಾಗ ಶಾಮ ಸ್ವಾತಂತ್ರ್ಯ ಬಂದ ಐದೇ ತಿಂಗಳಿಗೆ ಗರ್ಭಪಾತ ಎಂದು ಹೇಳುತ್ತಾನೆ. ವೆಂಕಣ್ಣ ಮತ್ತು ಶಾಮನ ನಡುವೆ ರಾಜಕಾರಣ ಮತ್ತು ಗಾಂಧಿಜಿಯ ಮೇಲೆ ನಡೆದ ಬಾಂಬ್ ದಾಳಿಯನ್ನು ಕುರಿತ ಚರ್ಚೆಗಳು ನಡೆಯುತ್ತವೆ. ಸ್ವಾತಂತ್ರ್ಯ ಪಡೆಯಲು ಕಟ್ಟಿದ ಕಾಂಗ್ರೆಸ್ ಕಮಿಟಿಯಲ್ಲಿಯೇ ಗಾಂಧೀಜಿಯ ವಿರೋಧಿಗಳು ಇದ್ದಾರೆ ಎಂಬುದನ್ನು ಶಾಮ ಹೇಳುತ್ತಾನೆ. "ಪಾರ್ಟಿ ಕಟ್ಟಿದವರಿಗೆ ಅಶೋಕ ಚಕ್ರ, ಗಾಂಧಿ ಬೆನ್ನು ಕಟ್ಟಿದವರಿಗೆ ಶೋಕಚಕ್ರ" ಎಂದು ಶಾಮ ಹೇಳುತ್ತಾನೆ. ಆಗ ವೆಂಕಣ್ಣ ಅರೆಬರೆ ತಿಳಿವಳಿಕೆಯ ಪತ್ರಕರ್ತ ಜಯರಾಯ ಅಂದ್ರೆ ಪಾರ್ಟಿ, ಪಾರ್ಟಿ ಅಂದರೆ ಜಯರಾಯ ಎರಡು ಒಂದೇ ಎಂದು ಹೇಳುತ್ತಾನೆ.

ಸರಿ ರಾತ್ರಿ ಮನೆಗೆ ಮುನಿಸಿಪಾಲಿಟಿ ಸಭೆ ಮುಗಿಸಿ ಬಂದ ಜಯರಾಯ ರೇಡಿಯೋದ ಸುದ್ದಿಯನ್ನು ಕೇಳುತ್ತಾರೆ. ಏನು ವಿಶೇಷವಿಲ್ಲ ಎಂದಾಗ ಮುನಿಸಿಪಾಲಿಟಿ ಸಭೆಯಲ್ಲಿ ಚರ್ಚೆಯಾದ ಮಾರುಕಟ್ಟೆಯ ಉದ್ಘಾಟನೆಗೆ ತರಕಾರಿ ವ್ಯಾಪಾರಿ ಬಾಗವಾನರ ಬಾಬುವನ್ನು ಕರೆಸಲು ತೀರ್ಮಾನವಾಯಿತು ಎಂದು ಹೇಳುತ್ತಾನೆ. ಸುದ್ದಿಯನ್ನು ವೆಂಕಣ್ಣ, ಶಾಮ, ರಂಗಮ್ಮ ಮತ್ತು ಗೋವಿಂದಪ್ಪನ ಎದುರಿನಲ್ಲಿ ಹೇಳುತ್ತಾರೆ. ಅಷ್ಟೇ ಅಲ್ಲದೇ 'ನಮ್ಮೊರಿಗೆ 'Drainage' ಇಲ್ಲ ಎಂದರೆ ಒಬ್ಬ ಕೌನ್ಸಿಲರ್ ಮುಂಬಯಿಂದ ತರಿಸೋಣ ಎಂಬುದಾಗಿ ಹೇಳುವ ಮತ್ತೊಬ್ಬ ಬರೀ ಮಾನಪತ್ರ ಕೊಟ್ಟರೆ ಉಪಯೋಗ ಇಲ್ಲವೆಂದು ಜಯರಾಯ ಹೇಳಿದರೆ, 'ಹಾಂಗಿದ್ದರ ಅದನ್ನು ರಿಜಿಸ್ಟರ್ ಮಾಡಿ ಕಳಿಸೋಣ ಎಂದು ಇನ್ನೊಬ್ಬ ಕೌನ್ಸಿಲರ್ ಮಾತಾನಾಡಿದ' ಹೀಗೆ ಎಂದು ಅನೇಕ ವಿಚಾರಗಳನ್ನು ರಾಜಕಾರಣಿಗಳ ದಡ್ಡತನ. ಹುಂಬುತನವನ್ನು ಜಯರಾಯ ತುಂಬ ಬೇಸರ, ಕೋಪ, ಮಾರ್ಮಿಕವಾಗಿ ಹೇಳುತ್ತಾರೆ. ತರಕಾರಿ ಮಾರುಕಟ್ಟೆಯ ಉದ್ಘಾಟನೆಗೆ ಅದರ ಬಗ್ಗೆ ತಿಳಿವಳಿಕೆ ಇರುವ ಮಂತ್ರಿ, ದೊಡ್ಡ ಮನುಷ್ಯ ಇರಲಿ ಎಂದಾಗ ಸಭೆಯಲ್ಲಿ ಎಲ್ಲರೂ ಒಂದಾಗಿ ಬಾಬುವನ್ನು ಸೂಚಿಸಿದ ಸಂದರ್ಭವನ್ನು ಹೇಳುತ್ತಾರೆ. ಹಾಗೂ ಇಂತಹ ಮುಖಂಡರಿಂದ ಊರಿನ ಉದ್ಧಾರ ಸಾಧ್ಯನಾ ಎಂದು ಕೇಳುತ್ತಾರೆ ಇದು ಅರ್ಥವಾಗದ ವೆಂಕಣ್ಣ ಜಯರಾಯ ಹೇಳುವುದೆಲ್ಲ ಸತ್ಯ ಹಾಗೆಯೇ ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಹೇಳುತ್ತಾನೆ. ಹೀಗೆ ಮಾತನಾಡುತ್ತಾ ಇರುವಾಗ ಶಾಮ ಸಭೆಯಲ್ಲಿದ್ದ ಗಾಂಧೀಜಿ ಮೇಲೆ ಬಾಂಬ್ ಹಾಕಿದ ಸುದ್ದಿಯನ್ನು ಹೇಳಿದಾಗ ದಿಗ್ಮೂಢರಾಗಿ ಇದು ನಿಜವೇ ಎಂದು ಕೇಳುತ್ತ ರೇಡಿಯೋ ಹಾಕಲು ಜಯರಾಯ ಹೇಳುತ್ತಾರೆ. ಏನೂ ಅಪಾಯವಿಲ್ಲ ಮಹಾತ್ಮರು ಸುರಕ್ಷಿತವಾಗಿದ್ದರೆ ಎಂದು ಹೇಳಿದಾಗ ಗಾಂಧೀಜಿ ಕ್ಷೇಮವಾಗಿದ್ದರೆ, ಜಗತ್ತೇ ಕ್ಷೇಮ, ಮುವತ್ತು ಕೋಟಿ ಷಂಡರೊಳಗೆ ಪೌರುಷ ತುಂಬಿದ ಅಧ್ಬುತ ಸಾಹಸಿ. ಮೂವತ್ತುಕೋಟಿ ಹೆಣಗಳಲ್ಲಿ ಜೀವತುಂಬಿದ ಮಾಯಾವಿ' ಎಂದು ಹೇಳುತ್ತ 'ಅವರನ್ನು ಮೊದಲ ಸಲ ನೋಡಿದಾಗಿನ ದೃಶ್ಯವನ್ನು ನೆನಪು ಮಾಡಿಕೊಂಡು ಹೇಗೆ ಹೇಳುತ್ತಾರೆ. 'ಮುಖದಲ್ಲಿ ನಗೆ, ಕಣ್ಣಲ್ಲಿ ಕರುಣಾರಸ, ದನಿಯಲ್ಲಿ ಸಂಜೀವಿನಿ, ಸನ್ನಿಧಿಯಲ್ಲಿ ಸಾತ್ವಿಕಶಕ್ತಿ! ಅವರು ಹೇಳಿದ್ದರಿಂದಲೇ ತಾನು ವಕೀಲಿ ವೃತ್ತಿ ಬಿಟ್ಟಿದ್ದಾಗಿ ಜಯರಾಯ ಹೇಳುತ್ತಾರೆ.

ಅಂಕ ಮೂರರಲ್ಲಿ ಹನುಮಂತಪ್ಪ ಮತ್ತು ಆತನ ಸಂಗಡಿಗರು ಜಯರಾಯ ಮಾರುಕಟ್ಟೆಯ ಅಡಿಗಲ್ಲನ್ನು ಹಾಕಿಸುವ ವಿಚಾರವನ್ನು ಕುರಿತು ಮಾತನಾಡುತ್ತಾರೆ. ಹನುಮಂತಪ್ಪನ ಸಂಗಡಿಗರು ಜಯರಾಯನನ್ನು ಪಾರ್ಟಿಯಲ್ಲಿ ಇರಿಸಿಕೊಳ್ಳಲು ಇಷ್ಟವಿರುವುದಿಲ್ಲ. ಆ ವಿಷಯವಾಗಿ ಭೀಮಣ್ಣ, ಸೆಕ್ರೆಟರಿ ಮುಂತಾದವರು ತಾವು ರಾಜೀನಾಮೆ ಕೊಡುವುದಾಗಿ ಮಾತನಾಡಿದ ಸಂದರ್ಭದಲ್ಲಿ ಹನುಮಂತಪ್ಪ ಅವರನ್ನು ಸಮಾಧಾನಪಡಿಸುವ ನಾಟಕ ಮಾಡುತ್ತಾನೆ. ಇದಕ್ಕೆಲ್ಲ ಕಾರಣ ಜಯರಾಯನಿಂದ ತಮ್ಮ ಕೆಲಸಗಳು ಆಗುತ್ತಿಲ್ಲ ಎಂಬ ಬೇಸರ ಒಂದು ಕಡೆಗಾದರೆ ಜನರೆಲ್ಲ ಜಯರಾಯನ ಕಡೆಗೆ ಇದ್ದಾರೆ ಎಂಬ ಕೋಪ ಮತ್ತು ಬೇಸರ ಮತ್ತೊಂದು ಕಡೆ. ಇದೇ ರೀತಿ ಮುಂದುವರೆದರೆ ಮುಂದಿನ ಚುನಾವಣೆಯಲ್ಲಿ ತಾವು ಗೆಲ್ಲುವುದು ಕಷ್ಟವೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇದಕ್ಕಾಗಿ ಹನುಮಂತಪ್ಪ ಸೀನಪ್ಪ ಇಬ್ಬರು ಮಾರುಕಟ್ಟೆಯ ಉದ್ಘಾಟನೆಯ ಸಮಯಕ್ಕೆ ಜಯರಾಯ 'ದುಡ್ಡನ್ನು ತಿಂದಿದ್ದಾನೆ ಅಂತಲೂ ಮತ್ತೆ ಜಯರಾಯ ಇನಾಮಿನ ಆಸೆ ಹಚ್ಚಿ ತಮ್ಮ ಓಣಿಯೊಳಗಿನ ಗಟಾರ ಕಟ್ಟಿಸಿಕೋತಾನ ಅಂತಾ, ಮುನಿಸಿಪಾಲಿಟಿಯಿಂದಲೇ ತನ್ನ ಮನೆ ಖರ್ಚು ಸಾಗಿಸ್ತಾನಂತ' ಸುಳ್ಳು ಸುದ್ದಿಗಳನ್ನು ಹನುಮಂತಪ್ಪನ ಸಂಗಡಿಗರು ಊರಿನ ತುಂಬಾ ಹರಡುತ್ತಾರೆ. ಈ ಸುಳ್ಳು ಸುದ್ದಿಗಳು ಬೆಂಕಿಯಂತೆ ನಾನಾ ದಿಕ್ಕಿಗೆ ನಾನಾ ರೀತಿ ವೇಗವಾಗಿ ಹರಡಿ ಜನ ವದಂತಿಗಳಿಂದ ಉದ್ರೇಕಗೊಳ್ಳುವಂತೆ ಮಾಡುತ್ತದೆ. ೧೯೪೮ರಲ್ಲಿ ಗಾಂಧೀಜಿಯವರ ಕಗ್ಗೊಲೆ ನಡೆದಿರುತ್ತದೆ. ಉದ್ರೇಕಗೊಂಡ ಜನ ಮಾರುಕಟ್ಟೆಯ ಉದ್ಘಾಟನೆಯ ಚಪ್ಪರಕ್ಕೆ ಬೆಂಕಿ ಹಾಕುತ್ತಾರೆ. ಅದನ್ನು ಮನೆಯ ಮಹಡಿಯಿಂದ ನೋಡಿದ ರಂಗಮ್ಮ ಹೋದಲೆಲ್ಲಾ ಗಾಂಧೀಜಿಯವರ ಬೆಳಕು ಇತ್ತು. ಈಗ ನಾವು ಕತ್ತಲಲ್ಲಿ ಹೆಜ್ಜೆ ಇಡುವಂತೆ ಆಗಿದೆ ಎನ್ನುತ್ತಾಳೆ. ಆಗ ಮನೆಗೆ ಬಂದ ಶಾಮ ಜಯರಾಯನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರವನ್ನು ಹೇಳುತ್ತಾನೆ. ಗಾಂಧೀಜಿಯವರ ಹತ್ಯೆಯ ಸುದ್ದಿಯನ್ನು ಕೇಳಿದ ಜಯರಾಯರು ಮುನಿಸಿಪಾಲಿಟಿಯ ಕಚೇರಿಗೆ ರಜೆಯನ್ನು ನೀಡಿ ಎಲ್ಲರನ್ನು ಕಳುಹಿಸಿ ತಾವು ತುಂಬಾ ಹೊತ್ತು ಕಚೇರಿಯಲ್ಲಿ ಇದ್ದು ಹೊರಬರುತ್ತಾರೆ. ಅವರನ್ನು ಹಿಂಬಾಲಿಸಿಕೊಂಡು ಬಂದ ಜನ ಜಯರಾಯರ ಮೇಲೆ ಕಲ್ಲು ತೂರಾಟ ನಡೆಸುತ್ತಾರೆ. ಉದ್ಘಾಟನಾ ಮಂಟಪಕ್ಕೆ ಬೆಂಕಿ ಹಚ್ಚಿದರು, ಅದನ್ನು ಕಂಡ ಜಯರಾಯರು ಒಮ್ಮೆಲೆ ಚೀರಿ ಆ ಮಂಟಪದಲ್ಲಿ ನುಗ್ಗಿದರು. ಆಗ ಅಲ್ಲಿಗೆ ಬಂದ

ಗೋವಿಂದಪ್ಪ ಗಾಯಗೊಂಡ ಜಯರಾಯರನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಾನೆ. ಅದೃಷ್ಟವಶಾತ್ ಅವರಿಗೆ ಏನು ಹೆಚ್ಚಿನ ಪೆಟ್ಟು ಆಗಿರಲಿಲ್ಲ. ಗೋವಿಂದಪ್ಪ ಜಯರಾಯರು ಡಾಕ್ಟರ್ ಕಾರಿನಲ್ಲಿ ಮನೆಗೆ ಬರುವರೆಂದು ಹೇಳುತ್ತಾನೆ. ಜಯರಾಯರು ಡಾಕ್ಟರ್ ಕಾರಿನಲ್ಲಿ ಬಂದಿದ್ದನ್ನು ತನ್ನ ಜೊತೆ ಹನುಮಂತಪ್ಪ ಇದ್ದಿದ್ದನು ಮನೆಯಲ್ಲಿ ಹೇಳುತ್ತಾರೆ. ನಡೆದ ಘಟನೆಗಳನ್ನು ನೆನಪಿಸಿಕೊಂಡು ಮನೆಯಲ್ಲಿ ಹೇಳುತ್ತಾ, ಸಾವಿರಾರು ಮಂದಿ ಸೇರಿದ್ದಾಗ ಈ ಘಟನೆ ನಡೆದಿದೆ ಯಾರ ಮೇಲೆ ತಪ್ಪು ಹೊರಿಸುವುದು ಎಂದು ಹೇಳುತ್ತಾರೆ. ಗಾಂಧಿಯಂತಹವರೇ ಮರಣ ಹೊಂದಿದ ಮೇಲೆ ನನ್ನಂತಹವರು ಬದುಕಿ ಏನು ಪ್ರಯೋಜನ, ಇಂದಿನ ಗದ್ದಲದಲ್ಲಿ ನಾನು ಸತ್ತು ಹೋಗಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತಾರೆ. ವೆಂಕಣ್ಣ ಅವರನ್ನು ಅರ್ಧಕ್ಕೆ ತಡೆದಾಗ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳದೇ ನಿರ್ಣಯ, ನಾನು ಮುದುಕ, ನನ್ನ ತಪ್ಪು ತಿಳಿಯಲಿ ಎಂದು ಒಂದು ಏಟು ಕೊಟ್ಟರು ಎನ್ನುತ್ತಾರೆ. ಅಷ್ಟರಲ್ಲಿ ಅಲ್ಲಿಗೆ ಬಂದ ಹನುಮಂತಪ್ಪ ತನಗೆ ಈಗ ತಾನೆ ನಿಮಗೆ ಪೆಟ್ಟು ಬಿದ್ದ ಸುದ್ದಿ ತಿಳಿಯಿತು ಅದಕ್ಕಾಗಿ ವಿಚಾರಿಸಲು ಬಂದೆ ಎನ್ನುತ್ತಾನೆ. ಆಗ ಜಯರಾಯ ನೀವುಗಳೆಲ್ಲ ಸಹಿ ಹಾಕಿರುವ ರಾಜೀನಾಮೆ ಪತ್ರಗಳೆಲ್ಲಾ ನನ್ನ ಕೈ ಸೇರಿದೆ. ಈಗ ಮುನಿಸಿಪಾಲಿಟಿಯಲ್ಲಿ ನಾನು ಒಬ್ಬನೇ ಇರುವುದು ಎಂದು ಹೇಳುತ್ತಾನೆ. ಆಗ ಹನುಮಂತಪ್ಪ ಅದರ ಬಗ್ಗೆ ಯೋಚಿಸಬೇಡಿ ನಿಮಗೆ ತುಂಬಾ ತ್ರಾಸ(ಕಷ್ಟ) ಆಗಿದೆ ವಿಶ್ರಾಂತಿ ತೆಗೆದುಕೊಳ್ಳಿ ಎಂದು ಹೇಳುತ್ತಾನೆ. ಆಗ ಜಯರಾಯ ನಾನು ರಾಜೀನಾಮೆ ಕೊಡಬೇಕು ಇಲ್ಲಾ ಅಂದರೆ ಜನ ದಾಳಿ ಮಾಡುತ್ತಾರೆ ಎಂದಾಗ ಗೋವಿಂದಪ್ಪ ಅವರೆಲ್ಲ ಹನುಮಂತಪ್ಪನ ಕಡೆಯ ಜನ ಎಂದು ಹೇಳುತ್ತಾನೆ. ಆಗ ಕೋಪಗೊಂಡ ಹನುಮಂತಪ್ಪ ನೀವು ರಾಜೀನಾಮೆ ಕೊಡದಿದ್ದರೆ ಒಂದು ನರಪಿಳ್ಳೆಯು ಉಳಿಯುವುದಿಲ್ಲ ಎಂದು ಹೇಳಿ ಹೆದರಿಸುತ್ತಾನೆ. ಆಗ ವೆಂಕಣ್ಣ ಯಾರು ಇಲ್ಲದಿದ್ದರೂ ಎಲ್ಲವನ್ನು ರಾಯರು ಒಬ್ಬರೆ ನಿಬಾಯಿಸಲು ಸಮರ್ಥರೆಂದು ಹೇಳುತ್ತಾನೆ. ಕೋಪ ಕೆರಳಿದ ಹನುಮಂತಪ್ಪ ವೆಂಕಣ್ಣನನ್ನು ನೀನು ಹುಚ್ಚನಿರುವೆ ಪಾರ್ಟಿಯಲ್ಲಿ ಮುನಿಸಿಪಾಲಿಟಿಯ ಸ್ಥಾನಗಳನ್ನು ತುಂಬದೇ, ಪ್ರಜಾಪ್ರತಿನಿಧಿಗಳ ಸಹಕಾರವಿಲ್ಲದೇ ಒಬ್ಬನ ಕೈಯಲ್ಲಿ ಹುಲ್ಲುಕಡ್ಡಿ ಸಹ ಎತ್ತಿಡಲು ಸಾಧ್ಯವಿಲ್ಲವೆಂದು ಹೇಳುತ್ತಾನೆ. ಪಾರ್ಟಿ ಕೈಬಿಟ್ಟರೆ ಯಾರೂ ಏನೂ ಮಾಡಲಾಗಲ್ಲ ಎಂದಾಗ ರಂಗಮ್ಮ ಅಯೋಗ್ಯರು ನಾಲ್ಕು ಜನ ಸೇರಿದರೆ ಅದು ಪಾರ್ಟಿಯೇ ಎಂದಾಗ ಹನುಮಂತಪ್ಪ ಕೋಪದಿಂದ ಇದು ರಾಜಕಾರಣವೆಂದು ಹೇಳುತ್ತಾನೆ. ಅದಕ್ಕೆ ಹೆಂಗಸರು ರಾಜಕಾರಣದಲ್ಲಿ ಸೇರಬಾರದು ಎಂದು ಹೇಳುವೆಯೋ ಎಂದು ಕೇಳುತ್ತಾಳೆ. ಸ್ವಾತಂತ್ರ್ಯ ಹೋರಾಟದಲ್ಲಿ ಹೆಂಗಸರು ಇದ್ದರು. ಈಗಿನ ರಾಜಕಾರಣವೆಂದರೆ ಸ್ವಂತದ ಕೆಲಸವನ್ನು ಸಾಧಿಸಿಕೊಳ್ಳುವುದು ಎಂದು ಹೇಳುತ್ತಾಳೆ. ತನ್ನ ಗಂಡನ ಸ್ಥಿತಿ, ಇಂದಿನ ರಾಜಕಾರಣ ನೆನದು ನೀವು ಒಬ್ಬೊಂಟಿ ಆದಿರಲ್ಲ ಎಂದು ಬೇಸರ, ನೋವಿನಿಂದ ಕೇಳುತ್ತಾಳೆ. ತನಗೆ ಏನೂ ಆಗಿಲ್ಲವೆಂದು ಜಯರಾಯ ಹೇಳುತ್ತಾ 'ಬೆನ್ನೆಲುಬಾಗಿರುವ ಗೆಳೆಯ ಗೋವಿಂದಪ್ಪ, ವಿಶ್ವಾಸದಿಂದ ದುಡಿಯಲ್ಲಿಕ್ಕೆ ತಯಾರು ಇರುವ ವೆಂಕಣ್ಣನಂತಹ ತರುಣರು, ಸೋತು ಹಣ್ಣಾದಾಗ ಹುರಿದುಂಬಿಸಲು ಇರುವ ನೀನು ಇರುವಾಗ ನಾನು ಹೇಗೆ ಒಬ್ಬೊಂಟಿ' ಎಂದು ಜಯರಾಯ ಹೇಳುತ್ತಾರೆ. ಎಲ್ಲರೂ ಒಂದಾಗಿದ್ದನ್ನು ನೋಡಿದ ಹನಮಂತಪ್ಪನಿಗೆ ತಲೆಸುತ್ತಿದ ಹಾಗೆ ಆಗುತ್ತದೆ. ತಲೆಯನ್ನು ಹಿಡಿದುಕೊಳುತ್ತಾನೆ. ಆಗ ಶಾಮ ತಲೆಗೆ ಸುತ್ತುಬಂದಿಲ್ಲ, ಮುಂದೆ, ಕಣ್ಣ ಮುಂದಿದೆ ಚಕ್ರ ಕಣ್ಣು ತೆಗೆದು ನೋಡು, ಅದೇ ಮನುಷ್ಯನ ಹೃದಯ ಸಾಮ್ರಾಜ್ಯದ ರಾಷ್ಟ್ರಧ್ವಜದಂತೆ ಇರುವ ಶೋಕಚಕ್ರವೆಂದು ಹೇಳುತ್ತಾನೆ. ಇಲ್ಲಿಗೆ ನಾಟಕ ಮುಕ್ತಾಯವಾಗುತ್ತದೆ.

ಹೀಗೆ ಶೋಕಚಕ್ರ ನಾಟಕದಲ್ಲಿ ಪ್ರಸ್ತುತ ಸಾಮಾಜಿಕ, ರಾಜಕೀಯ ಬದುಕನ್ನು ಕುರಿತ ಚಿಂತನೆಗಳಿವೆ. ರಾಜಕಾರಣಿಗಳಲ್ಲಿನ ಹಿಂಸೆ, ಸ್ವಾರ್ಥ, ಸಮಯಸಾಧಕತನ, ಅಧಿಕಾರದ ದಾಹ, ಕುತಂತ್ರ, ಕಪಟತನ ಮುಂತಾದವುಗಳಿಗೆ ದಿವ್ಯ ಔಷಧಿ ಸ್ವಚ್ಚತೆ, ಸ್ವರಾಜ್ಯ, ರಾಮರಾಜ್ಯದಂತಹ, ಗಾಂಧಿತತ್ವ, ಗಾಂಧಿ ವಿಚಾರಗಳು. ಇವುಗಳಿಂದ ಸಮಾಜದ ಉದ್ಧಾರ ಅ ಮೂಲಕ ರಾಜ್ಯ, ದೇಶದ ಉದ್ಧಾರ ಸಾಧ್ಯ, ಇದು ಸಾರ್ವಕಾಲಿಕ ಸತ್ಯ, ಅಗತ್ಯ ಎಂಬುದು ನಾಟಕದಲ್ಲಿ ಕಂಡುಬರುತ್ತದೆ.

**ಸಿದ್ಧಪಡಿಸಿದವರು**

**ಡಾ.ಬಿ.ಕೆ.ಮಂಜುಳ**

**ಕನ್ನಡ ಅಧ್ಯಾಪಕರು**

**ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು, ಕೆ.ಜಿ.ಎಫ್**